ಅ) ದಿನಾಂಕ 30–10–90 ರವರೆಗೆ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 338 ಕಾನೂನು ಪದವೀಧರರು ನೊಂದಾಯಿಸಿರುತ್ತಾರೆ.

ಆ) ಹೌದು.

ಇ) ಸ್ಪೈಫುಡನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಆದಷ್ಟು ಬೇಗ.

ವಿಷಯ :– ಮಾಗಡಿ ತಾಲ್ಲೂಕಿನಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಸಾಲ ಮಂಜೂರಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 762 (1163)

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಮಾಗಡಿ ತಾಲ್ಲೂಕಿನಲ್ಲಿ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದಿಂದ ಎಷ್ಟು ಜನರಿಗೆ ಸಾಲ ಮಂಜೂರು ಮಾಡಲಾಗಿದೆ ?

2) ಮಂಜೂರಾತಿ ನೀಡಿದ ಒಟ್ಟು ಮೊತ್ತವೆಷ್ಟು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಯವರು) :–

1) ಮಾಗಡಿ ತಾಲ್ಲೂಕಿಗೆ ಒಟ್ಟು 24 ಜನ ಮತೀಯ ಅಲ್ಪ ಸಂಖ್ಯಾತರಿಗೆ ನಿಗಮದ ಸ್ವಾವಲಂಬನ ಸಾಲದ ಯೋಜನೆಯ ಅಡಿಯಲ್ಲಿ ಸಾಲ ಮಂಜೂರು ಮಾಡಲಾಗಿರುತ್ತದೆ.

2) ಈ 24 ಜನ ಮತೀಯ ಅಲ್ಪಸಂಖ್ಯಾತರ ಫಲಾನುಭವಿಗಳಿಗೆ ರೂ. 1,55,500–00 ಗಳ ಆರ್ಥಿಕ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಇದರಲ್ಲಿ ನಿಗಮದ ಮಾರ್ಜಿನ್ ಹಣದ ಮೊತ್ತರೂ.53,550-00 ಗಳಾಗಿದ್ದು, ಬ್ಯಾಂಕಿನ ಮೊತ್ತ ರೂ. 1,01,950–00 ಗಳಾಗಿರುತ್ತದೆ.

ವಿಷಯ :– ಪೋಲೀಸ್ ಪೇದೆಗಳ ನೇಮಕಾತಿಯಲ್ಲಿ ವಯೋಮಿತಿ ಮೀರುವ ಅಂಚಿನಲ್ಲಿರುವ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 764 (1217)

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪೋಲೀಸ್ ಇಲಾಖೆಯವರು ಹೊಸದಾಗಿ ಪೋಲೀಸ್ ಪೇದೆಗಳನ್ನು ಸಧ್ಯದಲ್ಲಿಯೇ ನೇಮಿಸಿಕೊಳ್ಳುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ ಈ ಸಮಯದಲ್ಲಿ ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಉದ್ಯೋಗಕ್ಕಾಗಿ ಹೆಸರುಗಳನ್ನು ನೊಂದಾಯಿಸಿ ಈಗ ವಯೋಮಿತಿ ಮೀರುವ ಅಂಚಿನಲ್ಲಿರುವ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಪ್ರಾಶಸ್ತ್ಯ ನೀಡಲು ಸರ್ಕಾರದ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಮಂತ್ರಿಗಳು) :–

ಅ) ನಿಜ.

ಆ) ನಿಯಮಾನುಸಾರ ಇದು ಸಾಧ್ಯವಿಲ್ಲ.

ವಿಷಯ :– ಪೋಲೀಸ್ ಠಾಣೆಗಳಲ್ಲಿ ಏಕರೂಪದ ಸಿಬ್ಬಂದಿ ನೇಮಕ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 766 (1251)

ಶ್ರೀ ಜಿ. ಎಸ್. ಆಚಾರ್ (ಬೈಂದೂರು) :– ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಪೋಲೀಸ್ ಠಾಣೆಗಳಲ್ಲಿ ಏಕರೂಪದ ಸಿಬ್ಬಂದಿ ನೇಮಕ ಇಲ್ಲದಿರುವುದು ನಿಜವಲ್ಲವೆ ?

ಅ) ಹಾಗಿದ್ದಲ್ಲಿ, ಮುಖ್ಯವಾದ ಪಟ್ಟಣಗಳಲ್ಲಿರುವ ಪೋಲೀಸ್ ಠಾಣೆಗಳಲ್ಲಿ ಕಡಿಮೆ ಸಿಬ್ಬಂದಿ, ಚಿಕ್ಕ ಊರಾದರೂ ಜಾಸ್ತಿ ಸಿಬ್ಬಂದಿ ಇದ್ದು ಶಾಂತಿ ಸುರಕ್ಷತಾ ಕಾರ್ಯ ಕಾಪಾಡಲು ತೊಂದರೆ ಆಗಿರುವುದು ನಿಜವಲ್ಲವೇ ?

ಇ) ಈ ತಾರತಮ್ಯ ಹೋಗಲಾಡಿಸಲು ಸರಕಾರದವರ ಕ್ರಮಗಳೇನು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಮಂತ್ರಿಗಳು :) –

ಅ) ಹೌದು.

ಆ) ಇಲ್ಲ.

ಇ) ಗ್ರಾಮೀಣ ಪಟ್ಟಣ ಮತ್ತು ನಗರ ಪೋಲೀಸ್ ಠಾಣೆಗಳಿಗೆ ತಕ್ಕಂತೆ ಏಕರೂಪದ ಸಿಬ್ಬಂದಿ ಪ್ರಮಾಣವನ್ನು ಈಗ ನಿಗದಿ ಪಡಿಸಲಾಗಿದೆ. ಈ ಪ್ರಮಾಣದಂತೆ ಸಿಬ್ಬಂದಿಯ ಪುನರ್ವಿಂಗಡಣೆ ಮತ್ತು ಸಿಬ್ಬಂದಿ ಹೆಚ್ಚಳದ ಬಗ್ಗೆ ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ :– ರಾಜ್ಯದಲ್ಲಿರುವ ಅಬಕಾರಿ ಕಂಟ್ರಾಕ್ಟ್‌ರ್‌ಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 767 (1232)

ಶ್ರೀಮತಿ ಮೋಟಮ್ಮ (ಮೂಡಿಗೆರೆ) :– ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಷ್ಟು ಜನ ಅಬಕಾರಿ ಕಂಟ್ರಾಕ್ಟರ್‌ಗಳಿದ್ದಾರೆ ?

ಆ) ಈ ಅಬಕಾರಿ ಕಂಟ್ರಾಕ್ಟ್‌ರ್‌ಗಳಲ್ಲಿ ಹರಿಜನ–ಗಿರಿಜನ ಕಂಟ್ರಾಕ್ಟ್‌ರುಗಳಿದ್ದಾರೆಯೇ ?

ಇ) ಹಾಗಿಲ್ಲದಿದ್ದಲ್ಲಿ ಇದರಲ್ಲಿ ಮೀಸಲಾತಿಗನುಸಾರವಾಗಿ, ಹರಿಜನ–ಗಿರಿಜನರನ್ನು ಅಬಕಾರಿ ಕಂಟ್ರಾಕ್ಟರು ಗಳಾಗಲು ಸರ್ಕಾರ ಅವಕಾಶ ಮಾಡಿಕೊಡುವುದೇ ?

ಶ್ರೀ ಕೆ. ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು) :–

ಅ) 97.

ಆ) ಇಲ್ಲ.

ಇ) ಹರಾಜುಗಳನ್ನು ಸಾರ್ವಜನಿಕವಾಗಿ ನಡೆಸಿ, ಹೆಚ್ಚಿನ ಸವಾಲುದಾರರನ್ನು ಸ್ವೀಕರಿಸಲಾಗುವುದು. ಆದುದರಿಂದ, ಮೀಸಲಾತಿ ನಿಯಮಗಳನ್ನು ಅನ್ವಯಿಸಲಾಗುವುದಿಲ್ಲ.

ವಿಷಯ :– ವಿವಿಧ ವರ್ಗಗಳ ಪೋಲೀಸ್ ಅಧಿಕಾರಿಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 768 (1255)

ಶ್ರೀ ಜಿ. ರಾಜುಗೌಡ (ಹನೂರು) :– ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧರ್ಮವೀರ ವರದಿ ಪ್ರಕಾರ ತಾಲ್ಲೂಕು ಆರಕ್ಷಕ ಠಾಣೆ, ಗ್ರಾಮಾಂತರ ಪೋಲೀಸ್ ಠಾಣೆ, ಪುರಸಭೆ ಕೇಂದ್ರದ ಪೋಲೀಸ್ ಠಾಣೆ, ಪಟ್ಟಣ ನಗರ ಪೋಲೀಸ್ ಠಾಣೆಗಳ ವಿವಿಧ ವರ್ಗಗಳ ಪೋಲೀಸ್ ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಸದರಿ ವರದಿಯನ್ನು ಜಾರಿಗೆ ತರಲು ವಿಳಂಬವಾಗಲು ಕಾರಣಗಳೇನು ? ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಮಂತ್ರಿಗಳು) :–

ಅ) ರಾಷ್ಟ್ರೀಯ ಪೋಲೀಸ್ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ವಿವಿಧ ಪೋಲೀಸ್ ಠಾಣೆ ಗಳಿಗೆ ನಿಗದಿಪಡಿಸಿದೆ ಸಿಬ್ಬಂದಿ ಅಧಿಕಾರಿಗಳ ಸಂಖ್ಯೆ ಹೀಗಿದೆ.